ಯಾಕೋ ಇತ್ತೀಚೆಗೆ ತೀರ ಹಚ್ಕೊಂಡು ಬಿಟ್ಟಿದ್ದಾರೆ, ಹೂಂ ಹಚ್ಕೊಳ್ಳದೇ ಏನು ಮಗ ತಲೆಯ ಮೇಲೆತ್ತಿ ಕೂಡಿಸಿಕೊಂಡಿರುವಾಗ. ಆರು ತಿಂಗಳ ಹಿಂದೆ ಬಚ್ಚಲಲ್ಲಿ ಕಾಲು ಜಾರಿ ಬಿದ್ದು ಸೊಂಟಕ್ಕೆ ಪೆಟ್ಟು ಹತ್ತಿದ್ದೇ ನೆಪವಾಗಿ ಹಾಸಿಗೆ ಹಿಡಿದಿದ್ದರಲ್ಲ; ಅಬ್ಬಬ್ಬಾ ಆಗೆಲ್ಲ ಅದೇನು ಉಪಚಾರ, ನರ್ಸುಗಳ ಓಡಾಟ! ಮನೇನೆ ನರ್ಸಿಂಗ್‌ಹೋಮು ಮಾಡಿದ್ದ ಅವಿನಾಶ. ಜಾರಿ ಹೋದಿತೇನೋ ಎಂಬಂತೆ ತಾಯಿಯ ಕೈಹಿಡಿದು ಗಂಟೆಗಟ್ಟಳೆ ಕೂತು ಬಿಡುತ್ತಿದ್ದ. ನರ್ಸ್‌ಗಳಿಂದ ಮಸಾಜಿನ ತಂತ್ರ ಕಲಿತು ತಿಂಗಳ ಕಾಲ ಸ್ವತಃ ಅವನೇ ಕಾಲು ಸೊಂಟ ನೀವಿ ವ್ಯಾಯಾಮ ಮಾಡಿಸಿದ್ದಕ್ಕೆ ವಾಕರಿನಿಂದ ನಡೆಯುವಷ್ಟಾಗಿದೆ ಈಗ. ಅಮ್ಮನ ಪ್ರೀತಿ ಮಾಡ್ಲಿ, ಬೇಡ ಅನ್ನೋರಾರು? ಆದರೆ ಪಕ್ಕದಲ್ಲೇ ಉಸಿರಾಡೋ ಹೆಂಡತಿಯೂ ಇದ್ದಾಳೆ ಅನ್ನೋದನ್ನೇ ಮರೀತಾನಲ್ಲಾ? ಎಂದಾದರೂ ನನ್ನ ಕೈ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ಅರೆಗಳಿಗೆ ಕೂತಿದ್ದಾನಾ ಇವ? ಮನಸ್ಸಿನಲ್ಲಿ ಆಗೀಗ ಎದ್ದ ಪ್ರಶ್ನೆಯನ್ನು ಅವನಿಗೇ ಕೇಳಿದ್ದಳು. ನಕ್ಕು ಬಿಟ್ಟವನು, "ಕಾಯಂ ಆಗಿ ನಿನ್ನ ಕೈ ಹಿಡಿದಾಗಿದೆ ಮತ್ತಿನ್ನೇನು ಹಿಡಿಯೋದು?" ಎಂದಿದ್ದ.

'ಬರೀ ಸಪ್ತಪದಿ ಸುತ್ತುವಾಗ ಒಮ್ಮೆ ಕೈ ಹಿಡಿದು ಬಿಟ್ಟರಾಯಿತೆ? ನಿನ್ನ ಗಲ್ಲಕ್ಕೆ ಗಲ್ಲ ಹಚ್ಚಿ ಉಸಿರಲ್ಲಿ ಉಸಿರು ಬೆರೆಸಿ ಸದಾ ಕೂಡಬೇಕೆನಿಸುತ್ತೆ ನಂಗೆ, ಬರೀ ರಾತ್ರಿ ಅರೆಬರೆ ಕತ್ತಲಲ್ಲೇಕೆ? ಹಗಲೂ ನಿನ್ನ ಸ್ಪರ್ಶ ಬೇಕು ನಂಗೆ' ಅಂತೆಲ್ಲ ಚೀರಬೇಕೆಂದುಕೊಳ್ಳುತ್ತಾಳೆ ಒಮ್ಮೊಮ್ಮೆ. ಆದರೆ ಅವನ ಗಂಭೀರ ಮುಖ ಕಂಡಾಗ ಮಾತೇ ಹೊರಡೋಲ್ಲ. ಅದರಲ್ಲೂ ದಿನದ ಮೀಟಿಂಗ್ ಪಾಯಿಂಟೆಂದರೆ ಡೈನಿಂಗ ಟೇಬಲ್ಲೊಂದೇ; ಅವ ಆಫೀಸಿಗೆ ಹೋಗೋ ನಸುಕಲ್ಲಿ ಇವಳಿಗೆ ಬೆಳಗಾಗಿರೋಲ್ಲ, ಸಾಯಂಕಾಲ ಅವ ತೋಟ ಗಿಡಮರ ಅಂತ ಹಚ್ಚಿಕೊಂಡರೆ ಇವಳು ಟಿವಿ ಪರದೆಯಲ್ಲಿ ಕನಸು ಹುಡುಕ್ತಾಳೆ. ಊಟ ಮಾಡುವಾಗಲೂ ಸಾಕು ಬೇಕುಗಳದ್ದೇ ರಾಜ್ಯ. ತಪ್ಪಿದರೆ, "ಇನ್ನೊಂಚೂರು ಪಲ್ಯ ಹಾಕಿಸ್ಕೋ ಅವಿ, ಜೀವಿಕಾ ತುಪ್ಪ ತಿನ್ಬೇಕು ಕಣೆ" ಇತ್ಯಾದಿ ಅತ್ತೆಯ ಆಗ್ರಹದ ಮಾತುಗಳು. ಆಗೆಲ್ಲ ಅವಿನಾಶನ ಕಣ್ಣು ಪ್ರೀತಿಯಿಂದ ಮಿಂಚುತ್ತವೆ. ಮಾತುಗಳೇ ಆ ಕ್ಷಣಕ್ಕೆ ಅಸಂಬದ್ಧ ಎನ್ನಿಸಿ ಸುಮ್ಮನೆ ಅವನ ರೆಪ್ಪೆಯಂಚಿನ ಹನಿ ನೋಡುತ್ತಾ ಕುಳಿತುಬಿಡುತ್ತಾಳೆ.



ಚಿಕ್ಕವಳಿದ್ದಾಗ ಅವಳಮ್ಮ ಮುನ್ನೂರೈವತ್ತು ದಿನಗಳೂ ಪೂಜೆ ಪುನಸ್ಕಾರ ಗೌರಿಗಂಗೆಯರಲ್ಲಿ ಕಳೆದುಹೋಗುತ್ತಿದ್ದಳು. ಅಡುಗೆ ಮಾಡಿ ಇಟ್ಟಳೋ ಅವಳ ಕೆಲಸ ಮುಗೀತು. ಗ್ರಹಗತಿ, ಜ್ಯೋತಿಷ್ಯ ಅಂತ ಕಂಡಕಂಡ ಸ್ವಾಮಿಗಳನ್ನು ಕೇಳ್ತಾ ದಿನವಿಡೀ ಹೊರಗಿರುವವಳಿಗೆ ಅಪ್ಪ, "ಇಷ್ಟೊಂದು ಅಂಧ ವಿಶ್ವಾಸ ಬೇಡ ವಿಶೂ" ಅಂತ ತಿಳಿಸಿಹೇಳಹೋದರೆ, "ಕಾಲೇಜಲ್ಲಿ ನೀವು ಹೇಳಿಕೊಡ್ತೀರಲ್ಲಾ ಆ ಗರಾಗರಾ ತಿರುಗೋ ಗ್ರಹಗಳೇ ಬ್ಯಾರೆ, ಇವೇ ಬ್ಯಾರೆ. ನಿಮ್ಮ ವಿಶ್ವಾಸ ನಿಮಗೆ, ನನ್ನದು ನನಗೆ" ಅಂತ ಸ್ಪಷ್ಟ ಹೇಳಿದಾಗಿಂದ ಅಪ್ಪ ಸುಮ್ಮನಾಗಿಬಿಟ್ಟಿದ್ದರು. ಬೆಳಗಾದೊಡನೆ ಅಮ್ಮ ತಲೆಗೆ ಸ್ನಾನ ಮಾಡಿ ಮಡಿ ಸೀರೆಯುಟ್ಟು ಮಂತ್ರ ಹೇಳ್ತಿದ್ದರೆ ಅವಳ ಎಣ್ಣೆ ಸೀಗೆಪುಡಿಗಳ ವಿಶಿಷ್ಟ ಕಂಪಿನ ಸೀರೆಯನ್ನು ಕೈಗೆ ಸುತ್ತಿಕೊಂಡು ಅವಳಿಗೊತ್ತಿಕೊಂಡು ಕೂಡಬೇಕು ಎನ್ನಿಸೋದು ಜೀವಿಕಾಗೆ. ಅಮ್ಮ ಮಾತ್ರ, "ಏ ಆಚೆ ಸರಿಯೇ ಹತ್ರ ಬರಬೇಡ" ಅಂತ ಆರ್ಭಟ ಮಾಡ್ತಾ ಕಳಶಗಳಲ್ಲಿ ನೀರು ತುಂಬತೊಡಗಿದಳೆಂದರೆ ಇವಳಿಗೆ ಅಡುಗೆ ಮನೆ, ದೇವರ ಮನೆ ಎರಡೂ ನಿಷಿದ್ಧ. ಆಗಲೇ ಅಣ್ಣ ಪುರು ಏನಾದ್ರೂ ತರಲೆ ತೆಗೆಯುತ್ತಿದ್ದ. ಇವಳು ಹೋ ಅಂತ ಕಿರಚುತ್ತಾ ಅಪ್ಪನ ಬಳಿ ಓಡಿ ಹೋದರೆ ಅಪ್ಪ ಏನೂ ಮಾತಾಡ್ತಿರಲಿಲ್ಲ. ತಮ್ಮ ಕನ್ನಡಕ ಇಳಿಸಿ ಒಮ್ಮೆ ನೋಡುತ್ತಿದ್ದರು. ಅವರ ಕಣ್ಣಿನ ಗಲಿಬಿಲಿ ಕಳೆದು ಇವಳು ಯಾರು ಅಂತ ತಿಳಿಯಲು ಹತ್ತಾರು ಸೆಕೆಂಡೇ ಬೇಕಾಗುತಿತ್ತು. ಆಗ ಜೀವಿಕಾಗೆ ಕೋಪದಿಂದ ಎರಡು ಕೊಟ್ಟಿದ್ದರೂ ಬರಲಿಕ್ಕಿಲ್ಲ ಅಂಥಾ ಅಳು ಒಳಗಿಂದ ಗುದ್ದಿಕೊಂಡು ಬರೋದು. ಅದನ್ನೂ ನುಂಗಿ ಗೊಂಬೆಯಾಗಿಬಿಡ್ತಿದ್ದಳು ಥೇಟ್ ಈಗಿನಂತೆಯೇ. ಅಪ್ಪನ ಹತ್ತಿರ ಕೂತು ಅವರನ್ನು